ಶ್ರೀ ಬಿ.ಎಸ್. ಯಡಿಯೂರಪ್ಪ: ಈಗ ಅದನ್ನು ನಿಲ್ಲಿಸಿದ್ದೇನೆ. ಈ ರಾಜ್ಯ ಸರ್ಕಾರದ ಯಾವುದೇ ಸಚಿವರ ಬಗ್ಗೆ, ಯಾವುದೇ ಇಲಾಖೆ ಬಗ್ಗೆ ನೀವು ಏನೇ ಮಾತನಾಡಿದರೂ ಅದಕ್ಕೆ ನಾನು ಜವಾಬ್ದಾರ. ನನ್ನ ಬಳಿ ಕೇವಲ Forest department ಇದೆ, ಇನ್ನೊಂದು ಇಲಾಖೆ ಇದೆ ಎಂದಲ್ಲ, ಏನೇ ಇದ್ದರೂ ಅದು ನನ್ನ ಜವಾಬ್ದಾರಿ. ಅದೇ ರೀತಿ ಅದು ನನ್ನ ಸಚಿವ ಸಂಪುಟದ ಜವಾಬ್ದಾರಿ. ಅದಕ್ಕಾಗಿಯೇ ನಾನು ಹೇಳುತ್ತಿರುವುದು, ಪ್ರತಿಯೊಂದು ವಿಷಯದಲ್ಲೂ 4–5 ದಿವಸ ಚರ್ಚೆ ಮಾಡೋಣ, ಸಾಧ್ಯವಾದರೆ ಇದನ್ನು ಕೊನೆ ಮಾಡಲು ಏನೇನು ಸಲಹೆಗಳನ್ನು ಕೊಡಬೇಕೋ ಕೊಡಿ, ಅದಕ್ಕೆ ನಾನು ಸಿದ್ಧನಿದ್ದೇನೆ ಎಂದು ಹೇಳುತ್ತಿದ್ದೇನೆ. ತುಮಕೂರಿನ ನಿಮಗೆಲ್ಲ ವಿಷಯ ಗೊತ್ತಿರುವುದರಿಂದ ಅದನ್ನು ಉದಾಹರಣೆಯಾಗಿ ಕೊಟ್ಟೆ ಅಷ್ಟೇ. ಇದರಲ್ಲಿ ಗುಟ್ಟೇನಿಲ್ಲ. ಈ ವಿಷಯದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ, ನಾನು ಬಂದ ಮೇಲೆ ಅದನ್ನು ನಿಲ್ಲಿಸಿದ್ದೇನೆ.

ಅಧ್ಯಕ್ಷರು: ಜಯಚಂದ್ರರವರೇ ನೀವು ನಾಳೆ ಮುಂದುರಿಸಿ.

ಶ್ರೀ ಟಿ.ಬಿ. ಜಯಚಂದ್ರ: ಆಯಿತು.

ಗಮನ ಸೆಳೆಯುವ ಸೂಚನೆಗಳು

ವಿಷಯ: ಕನಕಪುರ ಟೌನಿನ ಜನರು ಕಲುಷಿತ ಕುಡಿಯುವ ನೀರಿನಿಂದ ತೊಂದರೆಗೊಳಗಾಗಿದ್ದು, ಅವರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ಕನಕಪುರ ಟೌನಿನ ಜನರು ಕಲುಷಿತ ಕುಡಿಯುವ ನೀರಿನಿಂದ ತೊಂದರೆಗೊಳಗಾಗಿದ್ದು, ಅವರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರು ನಿಯಮ 73ರಡಿಯಲ್ಲಿ ಸರ್ಕಾರದ ಗಮನ ಸೆಳೆದಿರುವ ವಿಷಯಕ್ಕೆ ಈ ರೀತಿ ಉತ್ತರ ಕೊಡುತ್ತಿದ್ದೇನೆ.

ಕನಕಪುರ ಪಟ್ಟಣದಲ್ಲಿ ಪ್ರಸ್ತುತ 60,000 ಜನಸಂಖ್ಯೆ ಇದೆ. ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ತರುವ ವ್ಯವಸ್ಥೆಯು ಕನಕಪುರ ಪಟ್ಟಣದ

ಮುಖಾಂತರ ಬರುತ್ತಿದ್ದು, ಕನಕಪುರ ಪುರಸಭೆಗೆ ಕಾವೇರಿ ನೀರು ಸರಬರಾಜು ಮಾಡಲು 6.81 ದಶ ಲಕ್ಷ ಲೀಟರ್ (ಎಂ.ಎಲ್.ಡಿ) ನೀರು ಸರಬರಾಜು ಮಾಡಲು ದಿನಾಂಕ: 26/02/1999 ರಂದು ಬೆಂಗಳೂರು ಜಲಮಂಡಳಿ ನಿರ್ಧರಿಸಿದ್ದು, ಪ್ರಾರಂಭದ ಹಂತದಲ್ಲಿ 1.5 ಎಂ.ಎಲ್.ಡಿ ನೀರನ್ನು ನೀಡಲಾಗುತ್ತಿತ್ತು. ಪ್ರಸ್ತುತ 3.3 ಎಂ.ಎಲ್.ಡಿ ನೀರನ್ನು ಪ್ರತಿ ದಿನ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ ಪುರಸಭೆಯವರು ಈ ನೀರಿನ ಪ್ರಮಾಣವನ್ನು ಪಟ್ಟಣದ ಬೇರೆ ಬೇರೆ ಭಾಗಗಳಿಗೆ ದಿನಬಿಟ್ಟು ದಿನ ಸರಬರಾಜು ಮಾಡುತ್ತಿರುತ್ತಾರೆ.

ಇದರ ಜೊತೆಗೆ ಪಟ್ಟಣದಲ್ಲಿ ಒಟ್ಟು 77 ಬೋರ್ವೆಲ್ಲ್ಗಳಿದ್ದು, ಪ್ರತಿದಿನ ಅಂದಾಜು 1.5 ಎಂ.ಎಲ್.ಡಿ ನೀರು ದೊರೆಯುತ್ತಿದ್ದು, ಆದರೆ ಈ ನೀರು ಉಪ್ಪುನೀರು ಆಗಿರುವುದರಿಂದ ಸಾರ್ವಜನಿಕರು ಕುಡಿಯಲು ಬಳಸದೆ ಇತರೆ ಉದ್ದೇಶಗಳಿಗೆ ಬಳಸುತ್ತಿರುತ್ತಾರೆ. ಒಟ್ಟಾರೆ ಕನಕಪುರ ಪುರಸಭೆಗೆ 4.8 ಎಂ.ಎಲ್.ಡಿ ನೀರು ಗೃಹ ಬಳಕೆ ಮತ್ತು ಇತರ ಬಳಕೆಗೆ ಸರಬರಾಜು ಮಾಡಲಾಗುತ್ತಿದೆ. ಸದರಿ ಕೊಳವೆ ಬಾವಿಗಳ ನೀರು ಕಲುಷಿತವಾಗಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

ಬೆಂಗಳೂರು ಜಲಮಂಡಳಿಯು 6.81 ಎಂ.ಎಲ್.ಡಿ. ನೀರನ್ನು ನೀಡಲು ಒಪ್ಪಿದ್ದು, ಕನಕಪುರ ಪರಸಭೆಯವರು ಮೇಲಿನ ನೀರಿನ ಪ್ರಮಾಣವನ್ನು ಪೂರ್ಣವಾಗಿ ಬಳಸಿಕೊಳ್ಳಬೇಕಾಗಿರುತ್ತದೆ. ಇದಕ್ಕೆ ಪೂರಕವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಅಗತ್ಯವಿರುವ ವಿತರಣಾ ಜಾಲವನ್ನು ಅಳವಡಿಸಬೇಕಾಗಿರುತ್ತದೆ. ಈ ವಿತರಣಾ ಜಾಲವನ್ನು ವಿಸ್ತರಿಸಲು ಮುಂದಿನ ವರ್ಷದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕನಕಪುರ ಪಟ್ಟಣಕ್ಕೆ ನೀರು ಸರಬರಾಜು ಮಾಡುತ್ತಿರುವ ಸ್ಥಳೀಯ ಸಂಸ್ಥೆ ನೀರು ಉತ್ಪಾದನಾ ವೆಚ್ಚ ರೂ.1,09,83,860/- ಗಳನ್ನು ಬೆಂಗಳೂರು ಜಲಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಇದಕ್ಕೆ ಕನಕಪುರ ಪುರಸಭೆಯವರು ಮೇಲಿನ ಹಣವನ್ನು ಪಾವತಿಸಲು ಪುರಸಭೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ಜಲಮಂಡಳಿಯು ಮುಂದೆ ಅನುಷ್ಠಾನಗೊಳ್ಳುವ ಕಾವೇರಿ ನೀರು ಸರಬರಾಜು ಯೋಜನೆಗಳ ಮಿತಿಗೆ ಒಳಪಟ್ಟು ಕನಕಪುರ ಪಟ್ಟಣಕ್ಕೆ 2026 ಮತ್ತು 2041ನೇ ಇಸವಿಗೆ ಕ್ರಮವಾಗಿ 6 ಎಂ.ಎಲ್.ಡಿ ಮತ್ತು 8 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲು ಈಗಾಗಲೇ ಸರ್ಕಾರ ಮಂಜೂರಾತಿ ನೀಡಿದೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಸಚಿವರಾದ ಸುರೇಶ್ ಕುಮಾರ್‌ರವರು ಕನಕಪುರ ಪಟ್ಟಣಕ್ಕೆ 2026 ಮತ್ತು 2041ನೇ ಇಸವಿಗೆ ನೀರು ಕೊಡುತ್ತೇವೆ ಎಂದು ಹೇಳುತ್ತಾರೆ. ಅಷ್ಟು ಹೊತ್ತಿಗೆ ಯಾರು ಇರುತ್ತಾರೆ, ಯಾರು ಇರುವುದಿಲ್ಲ ಎಂದು ಹೇಳಲಾಗುವುದಿಲ್ಲ. ಮುಖ್ಯಮಂತ್ರಿಗಳು ಈಗ ಸಭೆಯಲ್ಲಿದ್ದಾರೆ. ಬೆಂಗಳೂರಿಗೆ ಬರುತ್ತಿರುವಂಥ ಕಾವೇರಿ ನೀರು ಬಹುತೇಕ ಕನಕಪುರ ತಾಲ್ಲೂಕಿನ ಜಮೀನಿನ ಮೇಲೇ ಬರುತ್ತದೆ. ಆವತ್ತಿನ ಕಾಲದಲ್ಲಿ ಎಕರೆಗೆ 25 ಸಾವಿರ, 50 ಸಾವಿರ ರೂಪಾಯಿಗಳನ್ನು ಕೊಟ್ಟು, ಈಗ ಜಮೀನು acqusitionಗೆ 2–3 ಲಕ್ಷ ರೂಪಾಯಿಗಳನ್ನು ಕೊಟ್ಟು ಮಾಡುತ್ತಿದ್ದಾರೆ. ಮೊದಲು ಅರ್ಕಾವತಿಯಲ್ಲಿ ಬಹಳ ಉತ್ತಮವಾದಂಥ ನೀರು ಇತ್ತು. ಸುತ್ತಲೂ ಬೋರ್‌ವೆಲ್ ಹಾಕಿ ಆ ನೀರನ್ನೇ ಕೊಡುತ್ತಿದ್ದರು. ಬೆಂಗಳೂರಿನ polluted ವೃಷಭಾವತಿ ನೀರು ಅರ್ಕಾವತಿ ನದಿ ನೀರಿಗೆ ಸೇರಿ, ಎಲ್ಲ 77 ಬೋರ್‌ವೆಲ್‌ಗಳಲ್ಲೂ ಬೆಂಗಳೂರಿನ sewerage ನೀರೇ ಬರುತ್ತಿದೆ. ಕಳೆದ 4–5 ವರ್ಷಗಳಿಂದ ಸುಮಾರು 40 ಸಾವಿರ ಕುಟುಂಬಗಳು ಆ ತಾಲ್ಲೂಕಿನಿಂದ ಬೆಂಗಳೂರಿಗೆ shift ಆಗಿವೆ. ಸುಮಾರು 75 ಸಾವಿರ ಓಟು ಅಲ್ಲಿ ಕಡಿಮೆಯಾಗಿವೆ. ಬೇಕಿದ್ದರೆ ನೀವು statistics ತರಿಸಿ ನೋಡಿ, ಏಕೆಂದರೆ, ಅಲ್ಲಿ ಜನರಿಗೆ ಅಷ್ಟು ದೊಡ್ಡ ತೊಂದರೆಯಾಗಿದೆ. B.W.S.S.B. ವತಿಯಿಂದ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಹಿಂದೆ ಒಂದು ಸಲ ಅಲ್ಲಿಗೆ ಬಂದು ಈ ಬಗ್ಗೆ ಒಂದು ಮೀಟಿಂಗ್ ಸಹಾ ಮಾಡಿದರು. ದೆಹಲಿಗೆ ಒಂದು proposal ಸಹಾ ಹೋಯಿತು. ಈ ಪಟ್ಟಣಕ್ಕೆ ಕಾವೇರಿ ನೀರು ಕೊಡಲು ಸುಮಾರು 40 ಕೋಟಿ ರೂಪಾಯಿಗಳಲ್ಲಿ ಯಾವುದಾದರೂ ಒಂದು ಸ್ಕೀಂನಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸೇರಿ ಮಾಡುವಂತೆ ಒಂದು proposal ಹೋಯಿತು. ಆದರೆ B.W.S.S.B. ಯವರು letter ಕಳುಹಿಸುವುದು late ಆಯಿತು. Project sanction ಆಯಿತು. ಮೊನ್ನೆ Chief Ministerರವರಿಗೂ ಒಂದು letter ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಒಂದು scheme ಇದೆ. ಏನೆಂದರೆ, ನರ್ಮ್‌ನಲ್ಲಿ magnet cities ಎಂದು ತೆಗೆದುಕೊಳ್ಳಲಿಕ್ಕೆ ಅವಕಾಶವಿದೆ. ಅದರಲ್ಲಿ ಅವರು ನೂರಾರು ಕೋಟಿ ರೂಪಾಯಿ ಕೊಡಲಿಕ್ಕೆ ತಯಾರಿದ್ದಾರೆ. ಮುಖ್ಯಮಂತ್ರಿಗಳು ಕೇಂದ್ರಕ್ಕೆ ಈ ಬಗ್ಗೆ ಒಂದು letter ಕಳುಹಿಸಿಕೊಟ್ಟರೆ, ಈ water scheme ಆಗುತ್ತದೆ, ಸಂಪೂರ್ಣವಾದಂಥ development ಅನ್ನು ತೆಗೆದುಕೊಳ್ಳಲು ಆಗುತ್ತದೆ. ಇದಕ್ಕೆ ನೀವೇ ಇಲ್ಲಿಂದಲೇ proposal ಕಳುಹಿಸಿದ್ದೀರಿ. ಅದಕ್ಕೆ ಅಲ್ಲಿ approval ಕೂಡ ಆಗಿದೆ. ನಾವು ನೀರಿಗಾಗಿ ಅಷ್ಟು ವರ್ಷಗಳ ಕಾಲ ಕಾಯಲು ಆಗುವುದಿಲ್ಲ. ಅಲ್ಲಿ ನೀರಿಗೆ ದೊಡ್ಡ ಸಮಸ್ಯೆಯಿದೆ. ಕನಕಪುರ

ಟೌನಿನ ಜನಸಂಖ್ಯೆ ಬೆಂಗಳೂರಿಗೆ ವಲಸೆ ಬರುವುದನ್ನು ನಿಲ್ಲಿಸಬೇಕು, control ಮಾಡಬೇಕು ಎಂದರೆ ಇಂಥ magnet townಗಳಿಗೆ, satellite townಗಳಿಗೆ ತಾವು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು. ಕನಕಪುರ ಟೌನಿಗೆ ಸಂಬಂಧಿಸಿದಂತೆ ಹಿಂದೆ ಬೇಕಾದಷ್ಟು notifications ಆಗಿವೆ. ದಯವಿಟ್ಟು ಇದನ್ನು satellite town ಆಗಿ ಪರಿವರ್ತನೆ ಮಾಡಿದರೆ ಒಳ್ಳೆಯದು. ಈಗಾಗಲೇ ಕೇಂದ್ರ ಸರ್ಕಾರದಲ್ಲಿ sanction ಆಗಿದೆ. ತಾವೂ ಕೂಡ ಬೇಗ ಇಲ್ಲಿಂದ letter ಕಳುಹಿಸಿದರೆ ಇಲ್ಲಿಯ ನೀರಿನ ಸಮಸ್ಯೆ ಬಗೆಹರಿಯಲು ಸಾಧ್ಯವಿದೆ. ಇಲ್ಲವೆಂದರೆ, ಈ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವೇ ಇಲ್ಲ. ಕಾವೇರಿ ನೀರನ್ನು ಮುಂದೆ ಕೊಡುತ್ತೇವೆ ಎಂದು ಹೇಳುವುದು ಬೇಡ. ದಯವಿಟ್ಟು ಕನಕಪುರಕ್ಕೆ ಕಾವೇರಿ ನೀರನ್ನು ಈಗ ಕೊಡುವುದಕ್ಕೆ ತಾವು ಯೋಚನೆ ಮಾಡಿ. ಅದಕ್ಕೆ ಏನು ಹಣ ಕಟ್ಟಬೇಕೋ ಅದನ್ನು ಜನರಿಂದ ವಸೂಲು ಮಾಡಲಿ. ಈಗ ಬರೀ 20–25% ಜನರಿಗೆ ಮಾತ್ರ ಕಾವೇರಿ ನೀರು ಸಿಗುತ್ತದೆ, 75% ಜನರಿಗೆ ಸಿಗುತ್ತಿಲ್ಲ. ದಯವಿಟ್ಟು ಅದರ ಬಗ್ಗೆ ತಾವು ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್:– ಈಗಾಗಲೇ ನಾವು ಹೇಳಿದ್ದೇವೆ, ಕನಕಪುರ ಪಟ್ಟಣಕ್ಕೆ ನೀರು ಪೂರೈಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿರುವುದನ್ನು ಹೇಳಿದ್ದೇವೆ. ಅಲ್ಲಿಗೆ ನೀರು ಕೊಟ್ಟೇ ಕೊಡುತ್ತೇವೆ. ಶಿವಕುಮಾರ್‌ರವರ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ: ದಿನಾಂಕ: 24/11/2009ರ ಕರ್ನಾಟಕ ಸರ್ಕಾರದ ಒಂದು ಮಂಜೂರಾತಿಯನ್ನು ನಿಮಗೆ ಓದಿ ಹೇಳುತ್ತೇನೆ.

"ಕನಕಪುರ ಪಟ್ಟಣಕ್ಕೆ ನೀರು ಪೂರೈಸುವ ಬಗ್ಗೆ: ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕನಕಪುರ ಪಟ್ಟಣಕ್ಕೆ ಅನುಮೋದಿತವಾಗಿರುವ 6.81 ಎಂ.ಎಲ್.ಡಿ. ನೀರಿನ ಜೊತೆಗೆ ಹೆಚ್ಚುವರಿಯಾಗಿ 2.19 ಎಂ.ಎಲ್.ಡಿ. ನೀರನ್ನು, ಒಟ್ಟು 9 ಎಂ.ಎಲ್.ಡಿ. ನೀರನ್ನು ಒದಗಿಸಲು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಮಂಜೂರಾತಿ ನೀಡಿದೆ." Already sanctioned. ಅದರಲ್ಲಿ conditions ಏನು ಎನ್ನುವುದು ಬೇಡ. ಹಾಗಿರುವಾಗ, ಸರ್ಕಾರದ ಕಡೆಯಿಂದ, ಮುಖ್ಯಮಂತ್ರಿಯವರ ಕಡೆಯಿಂದ ಒಂದು ಪತ್ರ ಬರೆಯಬೇಕೆಂದು ನೀವು ಏನು ಹೇಳಿದ್ದೀರಿ, ಪತ್ರ ಬರೆದು ಆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಸರ್ಕಾರದಿಂದ ಒಪ್ಪಿಗೆ ಇದೆ.

ಶ್ರೀ ಡಿ.ಕೆ. ಶಿವಕುಮಾರ್:– Kanakapura town ಅನ್ನು satellite town ಆಗಿ ಪರಿವರ್ತನೆ ಮಾಡಿದರೆ ಅದಕ್ಕೆ NURM ಹಣ ಬರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್:– satellite town ಕನಕಪುರ ಎಂದು

ಮಾಡುತ್ತೇವೆ

ಶ್ರೀ ಡಿ.ಕೆ. ಶಿವಕುಮಾರ್ :– Thank you

(2) ವಿಷಯ: ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದೊರಕುವ ಸಂಬಳ ಸೌಲಭ್ಯಗಳನ್ನು ನೀಡದಿರುವ ಬಗ್ಗೆ.

ಶ್ರೀ ಯು.ಟಿ. ಖಾದರ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಪ್ರಾಥವಿಕ ಶಾಲಾ ಶಿಕ್ಷಕರಿಗೆ ದೊರಕುವ ಸಂಬಳ ಸೌಲಭ್ಯಗಳನ್ನು ನೀಡದಿರುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ,

ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಲ್ಲಿ ವಿಶೇಷ ಶಾಲೆಗಳಿಗೆ ಸಹಾಯಧನ ನೀಡಲು ರಾಜ್ಯ ಅನುದಾನ ಸಂಹಿತೆ 1982 ಜಾರಿಯಲ್ಲಿರುತ್ತದೆ. ಅದರಂತೆ ವಿಶೇಷ ಶಾಲೆಗಳಿಗೆ ಜಿಲ್ಲಾ ವಲಯದಲ್ಲಿ ಅನುದಾನ ಒದಗಿಸುವ ಮುಂದುವರೆದ ಯೋಜನೆ ಅನುಷ್ಠಾನದಲ್ಲಿರುತ್ತದೆ.

ಅದರಂತೆ ರಾಜ್ಯದಲ್ಲಿ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ 8 ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳಿಗೆ ಅನುದಾನವನ್ನು ಒದಗಿಸಲಾಗುತ್ತದೆ. ಸದರಿ ಶಾಲೆಗಳ ವಿವರ ಕೆಳಕಂಡಂತಿದೆ.

1. ಬಾಲಮನೋವಿಕಾಸ ಕೇಂದ್ರ, ಮಲ್ಲೇಶ್ವರಂ, ಬೆಂಗಳೂರು
2. ಸೋಫಿಯಾ ಆಪರ್ಚುನಿಟಿ ಶಾಲೆ, ಹೈಗ್ರೌಂಡ್ಸ್, ಪ್ಯಾಲೇಸ್ ರಸ್ತೆ, ಬೆಂಗಳೂರು
3. ಮಾಥ್ರೋಮಾ ಅಪರ್ಚುನಿಟಿ ಸ್ಕೂಲ್, ಬೇತಲ್ ನಗರ, ಕೆ.ಆರ್.ಪುರಂ, ಬೆಂಗಳೂರು
4. ಬುದ್ದಿಮಾಂದ್ಯ ಮಕ್ಕಳ ವಿಶೇಷ ಶಾಲೆ, ಹೊಸೂರು ರಸ್ತೆ, ಬೆಂಗಳೂರು
5. ಆರಾಧನಾ ಸ್ಕೂಲ್ ಫಾರ್ ಸ್ಲೋಲರ್ನರ್ಸ್, ಪಾರ್ವತಿನಗರ, ಬೆಳಗಾಂ
6. ಡಾ॥ ಸ್ಪೀನರ್ಸ್ ಕ್ಯೂರೇಟಿವ್ ಎಜುಕೇಷನಲ್ ಇನ್ಸ್ಟಿಟ್ಯೂಟ್ ಫಾರ್ ದಿ ಮೆಂಟಲಿ ರಿಟಾರ್ಡೆಡ್, ಡಿ.ಸಿ. ಕಾಂಪೌಂಡ್, ಧಾರವಾಡ